**ಓ.ಎಸ್. ನಂ. 45/2021** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 6.12.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ</u>

ನಿಪಿ14 ರಿಂದ ನಿಪಿ36 ನನ್ನ ಮಗನಿಗೆ ಸಂಬಂಧಪಟ್ಟ ದಾಖಲಾತಿಗಳು ಎಂದರೆ ಸರಿ. ನಿಪಿ15 ರಿಂದ 36 ರಶೀದಿಗಳು ಮನೆ ಸಾಲವನ್ನು ಪಾವತಿ ಮಾಡಿದ ರಶೀದಿಗಳು ಎಂದರೆ ಸರಿ. ನನ್ನ ವಾದಪತ್ರದಲ್ಲಿ ಪ್ರತಿವಾದಿಯು 11.32 ಲಕ್ಷವನ್ನು ಬ್ಯಾಂಕ್ ಸಾಲಕ್ಕಾಗಿ ಪಾವತಿ ಮಾಡಿರುತ್ತಾನೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಬ್ಯಾಂಕ್ ಸಾಲ ಮರುಪಾವತಿಯಾದ ನಂತರ ದಾವಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯು ಬ್ಯಾಂಕ್ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿ ದಿನಾಂಕ 5.10.2020 ರಂದು ಕ್ಲಿಯರೆನ್ಸ ಸರ್ಟಿಪಿಕೆಟನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸಂಪೂರ್ಣ ಸಾಲವನ್ನು ಮರುಪಾವತಿ ಮಾಡಿ ಕ್ಲಿಯರೆನ್ಸ ಸರ್ಟಿಪಿಕೆಟನ್ನು ಪಡೆದುಕೊಂಡ ನಂತರ ದಾವಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ14 ರಿಂದ 36 ದಾಖಲಾತಿಗಳು ಈ ಕೇಸಿಗೆ ಸಂಬಂಧಪಡದಿದ್ದರೂ ಸಹ ಕೇಸನ್ನು ಕಾಲಹರಣ ಮಾಡಲು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.